ಕೆ. ಎಸ್. ಆರ್. ಟಿ. ಸಿ. ಬಸ್ ನಿಲ್ದಾಣದ ಅಭಿವೃದ್ಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 20 : (93)

ಸದಸ್ಯರ ಹೆಸರು : ಶ್ರೀ ಸುರೇಶ್ ಬಾಬು ಸಿ. ಬಿ. (ಚಿಕ್ಕನಾಯಕನ ಹಳ್ಳಿ)

ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ (ಸಾರಿಗೆ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಚಿಕ್ಕನಾಯಕನಹಳ್ಳಿ ಟೌನ್‌ನಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ವಿದ್ದು, ಉಪಯೋಗವಾಗುತ್ತಿಲ್ಲ ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಉಪಯೋಗದಲ್ಲಿದೆ. ಸಾರ್ವಜನಿಕರು ಸಾಕಷ್ಟು ಮಟ್ಟದಲ್ಲಿ ಬಸ್ ನಿಲ್ದಾಣಕ್ಕೆ ಬಂದು ಬಸ್ಸುಗಳಲ್ಲಿ ಸಂಚರಿಸುವುದಿಲ್ಲ.
ಆ.	ಹಾಗಿದ್ದಲ್ಲಿ, ಈ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಎಲ್ಲಾ ವೇಗದೂತ ಮತ್ತು ಸಾಮಾನ್ಯ ಬಸ್ಸುಗಳನ್ನು ಬಸ್‌ನಿಲ್ದಾಣದ ಮೂಲಕವೇ ಕಾರ್ಯಾಚರಣೆ ಮಾಡಲಾಗುವುದು. ಹಣಕಾಸಿನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಬಸ್ ನಿಲ್ದಾಣದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಶ್ರೀ ಸಿ. ಬಿ. ಸುರೇಶ ಬಾಬು : ಚಿಕ್ಕನಾಯಕನಹಳ್ಳಿ ಟೌನ್‌ನಲ್ಲಿ bus standಇದೆ. ಅದು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದರಿಂದ, ಅಲ್ಲಿ ಯಾವ ಬಸ್ಸುಗಳೂ bus Stand ಒಳಗಡೆ ಹೋಗುವ ಪರಿಸ್ಥಿತಿಯಲ್ಲಿಲ್ಲ. ಅಲ್ಲಿ Compound, ಶೌಚಾಲಯ ಮತ್ತು ಡಾಂಬರೀಕರಣ ಕೂಡ ಆಗಿಲ್ಲದೇ ಇರುವುದರಿಂದ ಅಲ್ಲಿ ಕೊಚ್ಚೆ ಆಗಿರುವುದರಿಂದ ಯಾವ ಬಸ್ಸುಗಳೂ ಕೂಡ bus Stand ಒಳಗಡೆ ಹೋಗುತ್ತಿಲ್ಲ. ಆದ್ದರಿಂದ, ದಯಮಾಡಿ, ಸನ್ಮಾನ್ಯ ಸಾರಿಗೆ ಸಚಿವರು ಅಲ್ಲಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟರೆ, ನಮ್ಮ ತಾಲ್ಲೂಕಿನ ರಸ್ತೆ ಮೂಲಕವಾಗಿ KSRTC ಬಸ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಹೊಸದುರ್ಗದಿಂದ ಬೆಂಗಳೂರಿಗೆ ಹಾದು ಹೋಗುತ್ತವೆ. ಪ್ರಯಾಣಿಕರೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ದಯಮಾಡಿ, ಅಲ್ಲಿಗೆ ಸನ್ಮಾನ್ಯ ಸಾರಿಗೆ ಸಚಿವರು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಆರ್. ಅಶೋಕ : ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದ ಬಸ್ ನಿಲ್ದಾಣವನ್ನು ಸುಮಾರು 10 ಲಕ್ಷ ರೂಪಾಯಿಗಳ ಅನುದಾನದಲ್ಲಿ ಕಟ್ಟಲಾಗಿದೆ. ಅಲ್ಲಿ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೂ ಸಹ ಅದು ಟೌನ್‌ನಿಂದ 100 ಮೀಟರ್ ದೂರವಿರುವುದರಿಂದ ಅಲ್ಲಿಗೆ ಜನರು ಹೋಗುವುದಕ್ಕೆ ತೊಂದರೆಯಾಗುತ್ತದೆ. ಅಷ್ಟಿದ್ದರೂ ಸಹ, ಇನ್ನು ಮುಂದೆ ಆ ರೂಟ್‌ನಲ್ಲಿ ಓಡಾಡುವಂಥ ಎಲ್ಲಾ ಬಸ್ಸುಗಳೂ ಆ ಬಸ್ ನಿಲ್ದಾಣಕ್ಕೆ ಹೋಗಬೇಕೆನ್ನುವ ನಿರ್ದೇಶನವನ್ನೂ ಸಹ ನಾನು ಕೊಡುವವನಿದ್ದೇನೆ. ಅದರ ಜೊತೆಗೆ, ತಾವು ಮನವಿ ಮಾಡಿದಂತೆ, ಆ ಬಸ್ ನಿಲ್ದಾಣವನ್ನು ಇನ್ನೂ ಅಭಿವೃದ್ಧಿಪಡಿಸಬೇಕು, ನಾಗರಿಕ ಸೌಲಭ್ಯಗಳು ಹೆಚ್ಚಿಗೆ ಸಿಗಬೇಕು ಎನ್ನುವ ಮಾತನ್ನು ತಾವು ಸರ್ಕಾರಕ್ಕೆ, ಸಾರಿಗೆ ಇಲಾಖೆಗೆ ವಿನಂತಿಸಿದ್ದೀರಿ. ಅದರಂತೆ, ನಂಜುಂಡಪ್ಪ ವರದಿಯನುಸಾರ ವಿಶೇಷ ಅನುದಾನದಡಿಯಲ್ಲಿ 25 ಲಕ್ಷ ರೂಪಾಯಿಗಳನ್ನು ಈ ವರ್ಷದಲ್ಲಿ ಕೊಡುವವರಿದ್ದೇವೆ. ಅದರಲ್ಲಿ Compound ಕಟ್ಟುವುದು, ಅಲ್ಲಿಗೆ asphalt ಮಾಡುವುದು, ಶೌಚಾಲಯ, ಚೇರ್ ಮುಂತಾದ ವ್ಯವಸ್ಥೆ ಮಾಡುವುದಕ್ಕೆ ಈ ವರ್ಷದಲ್ಲಿಯೇ ನಾನು 25 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಅಲ್ಲಿ ಸುವ್ಯವಸ್ಥಿತವಾದ ಬಸ್ ನಿಲ್ದಾಣ ಮಾಡುವುದರಲ್ಲಿ ಸಾರಿಗೆ ಇಲಾಖೆ ಕ್ರಮ ಕೈಗೊಳ್ಳುತ್ತದೆನ್ನುವ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತೇನೆ.

ಶ್ರೀ ಸಿ. ಬಿ. ಸುರೇಶಬಾಬು : ಧನ್ಯವಾದಗಳು.

ಶ್ರೀ ಟಿ. ಬಿ. ಜಯಚಂದ್ರ : ಇದು ನನ್ನ ತಾಲ್ಲೂಕಿಗೆ ಬರುತ್ತದೆ. ಅಲ್ಲಿ ಯಾವುದೇ ಹೋಟೆಲ್‌ಗಳು ಇಲ್ಲದ ಕಾರಣ ಅಲ್ಲಿಗೆ ಯಾವ ಬಸ್ಸುಗಳೂ ಹೋಗುವುದಿಲ್ಲ. ಆದ್ದರಿಂದ, ಹೋಟೆಲ್‌ಗಳನ್ನು ಅಲ್ಲಿಗೆ Shift ಮಾಡುವ ರೀತಿಯಲ್ಲಿ ಅದಕ್ಕೆ ಸೌಕರ್ಯಗಳನ್ನು ಮಾಡಿಕೊಟ್ಟರೆ, ಅದು ಸಾಧ್ಯವಾಗುತ್ತದೆ. ಅದೇರೀತಿಯಾಗಿ, ನನ್ನ ಕ್ಷೇತ್ರದಲ್ಲಿ ಕಳ್ಳಂಬೆಳ್ಳದ ಬಸ್ ನಿಲ್ದಾಣಕ್ಕೆ ಕೂಡ ಬಸ್ಸುಗಳು ಬರುತ್ತಿಲ್ಲ. ಒಂದು ಬಸ್ಸು ಕೂಡ ಬಸ್ ನಿಲ್ದಾಣದ ಒಳಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಹೋಗುವುದೂ ಇಲ್ಲ. ದಯಮಾಡಿ, ಅದರ ಬಗ್ಗೆಯೂ ಕೂಡ ತಾವು ಚಿಂತನೆ ಮಾಡಬೇಕು.

ಶ್ರೀ ಆರ್. ಅಶೋಕ : ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಕಟ್ಟುವ ಸಂದರ್ಭದಲ್ಲಿ ಊರಿನಿಂದ ಹೊರಭಾಗದಲ್ಲಿ connectivity ಇರದ ಸ್ಥಳದಲ್ಲಿ ಕಟ್ಟಿರುವುದಕ್ಕೆ ಜನ ಸಾಮಾನ್ಯರು ಓಡಾಡುವುದಕ್ಕೆ ಸಮಸ್ಯೆಯಾಗಿದೆ. ಅದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತಿದ್ದೇನೆ, ಈ ತರಹ ಬಸ್ ನಿಲ್ದಾಣ ಕಟ್ಟಿ ಅಲ್ಲಿ ಯಾವುದೇ ರೀತಿಯ ಉಪಯೋಗವಾಗದಿರುವ ಬಸ್ ನಿಲ್ದಾಣಗಳು ಬಹಳಷ್ಟಿವೆ. ಅದರ ಬಗ್ಗೆ ಮರು ಯೋಜನೆಯನ್ನು ಮಾಡಿ, ಅಲ್ಲಿ ನಾಗರಿಕ ಸೌಲಭ್ಯ ಸಿಗುವ ಹಾಗೆ, ಹೋಟೆಲ್, telephone booth ಇರಬಹುದು, ಅಂಗಡಿ ಮಳಿಗೆಗಳಿರಬಹುದು - ಈ ತರಹದ ವ್ಯವಸ್ಥೆಯನ್ನು ತಾವು ಕಲ್ಪಿಸಿಕೊಟ್ಟರೆ ಜನ ಸರಾಗವಾಗಿ ಹೋಗುವುದಕ್ಕೆ ವ್ಯವಸ್ಥೆಯಾಗುತ್ತದೆ. ಆದ್ದರಿಂದ, ಮುಂದಿನ ದಿನಗಳಲ್ಲಿ ಈ ವ್ಯವಸ್ಥೆಯನ್ನೆಲ್ಲ ಅಲ್ಲಿ ಕಲ್ಪಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳುತ್ತೇನೆ. ಚಿಕ್ಕನಾಯಕನಹಳ್ಳಿಯಲ್ಲಿ ಆ ತರಹ ವ್ಯವಸ್ಥೆ ಮಾಡುವುದಕ್ಕೋಸ್ಕರವೇ 25 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ತರಹದ ಸಮಸ್ಯೆ ಎಲ್ಲೆಲ್ಲಿದೆ ಅವೆಲ್ಲವನ್ನೂ ಪರಿಶೀಲನೆ ಮಾಡಿ ಗಮನವನ್ನು ಹರಿಸುತ್ತೇವೆ.

ಅಧ್ಯಕ್ಷರು : ಸಂಗಮೇಶ್ವರರವರೆ, ತಮ್ಮ ಪ್ರಶ್ನೆ ಸಂ : 21(3) ಅನ್ನು held over ಮಾಡಿ 29ನೇ ತಾರೀಖಿಗೆ ಮುಂದಕ್ಕೆ ಹಾಕಿದ್ದೇನೆ. ಆ ದಿನದಂದು ಗೃಹ ಮಂತ್ರಿಗಳು ಉತ್ತರ ಕೊಡುತ್ತಾರೆ. 29ನೇ ತಾರೀಖಿನಂದು ನಾನು ನಿಮಗೆ ಅವಕಾಶಕೊಡುತ್ತೇನೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 2ನೇ ಪಟ್ಟಿಯಲ್ಲಿರುವ 25 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ. (ಅನುಬಂಧ-I)

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12.39 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 23ನೇ ಜುಲೈ 2008 ಬುಧವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)